'ಮಾಂಸವಿಲಾಸ' ಪ್ರಬಂಧದ ಮೂಲಕ 'ಮಯೂರ' ಲೇಖಕರ ಬಳಗಕ್ಕೆ ಸೇರ್ಪಡೆಯಾಗುತ್ತಿರುವ ಜಿ.ಎನ್. ಧನಂಜಯ ಮೂರ್ತಿ ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರು. ಸಾಮಾಜಿಕ ಅಸಮಾನತೆಯ ಕುರಿತು ಅವರ ಬರಹಗಳು ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತವೆ.

ಹೊಂದಿಸಿಕೊಡುತ್ತಿದ್ದರು. ಅದನ್ನು ನೆನಪಿಸಿಕೊಂಡಾಗಲೆಲ್ಲ ಈಗಲೂ ಜೀವ ದೇಕುತ್ತದೆ, ಹೃದಯದಲ್ಲಿರುವ ಪ್ರಾಣವು ರಸನದ ತುದಿಗೆ ಬಂದು ರಸಸ್ರಾವವೇ ಆಗಿಹೋಗುತ್ತದೆ. ದಾವಣಗೆರೆಯಲ್ಲಿ ಓದುತ್ತಿದ್ದಾಗ ವಿದ್ಯಾರ್ಥಿಭವನದಲ್ಲೊಂದು 'ಭರಣಿ' ಎಂಬ ಮಟನ್ ಹೋಟೆಲ್ ಇತ್ತು. ಇತ್ತೆಂದರೆ ಸಾಲದು, ದಾವಣಗೆರೆಯ ನಾಗರಿಕ ಮಾಂಸಾಹಾರಿಗಳಿಗೆ 'ಕಾಂತಾಸಮ್ಮಿತ'ದಂತಿದ್ದ ಅದು, ಮುಖ್ಯರಸ್ತೆಯ ಪಕ್ಕದಲ್ಲಿಯೇ ತಲೆಎತ್ತಿ ನನ್ನನ್ನು ಸಾಲಗಾರನನ್ನಾಗಿ ಮಾಡುವಲ್ಲಿ ತನ್ನ ಕೊಡುಗೆಯನ್ನೂ ನೀಡಿತ್ತು. ಸಾಲಮಾಡಿಯಾದರೂ ಮಾಂಸ ತಿನ್ನುವ ಕಲೆ ಕಲಿಸಿದ ಮಹತ್ತು ಅದರದು. ಆ ಹೋಟೆಲ್ಲು ಮನೆಯ ಬೋರ್ಡಿನ ಮೇಲೆ ಬಿಡಿಸಿದ್ದ, ಸೊಗಸಾದ ಪೊಗರುದಸ್ತಾದ ಸುರುಳಿಸುರುಳಿಯಾಗಿರುವ ಕೊಂಬುಗಳುಳ್ಳ ಟಗರಿನ ಚಿತ್ರ, ಬಾಳೆಎಲೆಯ ಮೇಲೆ ಮುದ್ದೆಯೊಂದಿಗೆ ಮುದ್ದಾಗಿ ಬಿದ್ದಿರುತ್ತಿದ್ದ ನಾಲ್ಕು ನಲ್ಲಿ ಮೂಳೆಗಳ ಚಿತ್ರಗಳು ವ್ಯಾನ್ ಗೋನ ಚಿತ್ರಗಳಂತೆ ಬರಸೆಳೆದು ಬಕ್ಕಣದಲ್ಲಿ ರೊಕ್ಕ ಇಲ್ಲದಿದ್ದರೂ ಸಾಲಗಾರನನ್ನಾಗಿ ಮಾಡಿ, ನಮ್ಮನ್ನು ಸೂಜಿಗಲ್ಲಿನಂತೆ ತಮ್ಮತ್ತ ಸೆಳೆಯುತ್ತಿದ್ದವು. ಬಹುಶಃ ಧರಣಿಯ ಮೇಲಿನ ಅತ್ಯಂತ ಪವಿತ್ರ ಸ್ಥಳ ಆ ಭರಣಿ ಹೋಟೆಲ್ಲೆ.

ಜೀವನೋಪಾಯಕ್ಕಾಗಿ ಹಾಸನಕ್ಕೆ ಪ್ರಯಾಣ ಬೆಳೆಸಿದಾಗ ನಾನು ಮಾಂಸದಾಸನಾಗಿ ಹೋದೆ. ಹಾಸನ ಬಹುತೇಕ ಶುದ್ಧ ಮಾಂಸಾಹಾರಿಗಳಿರುವ ಕ್ಷೇತ್ರ. ರಾಗಿ ಮುದ್ದೆ, ನಾಟಿಕೋಳಿ ಸಾರಿಗೆ ಪ್ರಸಿದ್ಧರಾಗಿರುವ ಮಾಜಿ ಪ್ರಧಾನಿಗಳ ಹುಟ್ಟೂರಿನಲ್ಲಿ ಪ್ರತಿ ಮಂಗಳವಾರ ಒಟ್ಟಿಗೆ ವಾಸಿಸುತ್ತಿದ್ದ ಗೆಳೆಯರೆಲ್ಲರೂ ಹಂದಿಮಾಂಸದಡುಗೆಗೆ ಸಿದ್ಧರಾಗುತ್ತಿದ್ದರು. ಕುರಿ, ಕೋಳಿ, ಮೇಕೆ ಮತ್ತು ಮೊಲಗಳಷ್ಟನ್ನೇ ಭುಜಿಸಿದ್ದ ನಾನು, ಮೊದ ಮೊದಲು ಅದರಲ್ಲಿ ಗೈರಾಗುತ್ತಿದ್ದೆ. ಮೊದಲನೇ ದಿನ ಅವರುಣ್ಣುವುದನ್ನು ನೋಡಿ ಹೇಗೋ ಸಹಿಸಿಕೊಂಡೆ. ಎರಡನೇ ಸಲ, ಸಂಕಲ್ಪಸಿದ್ಧಿಯನ್ನು ಸ್ವಲ್ಪ ಸಡಿಲಿಸಲು ಪ್ರಾರಂಭಿಸಿ, ಮೂರನೇ ಸಾರಿ ನಾನೂ ಸೂಕರನ ಬೇಟೆಗೆ ಸಿದ್ಧನಾಗಿಬಿಟ್ಟೆ. ಅಂತೂ ಹುಲಿಯನ್ನು ಸೀಳಿದ ಸಳನೂರಿನಲ್ಲಿ ಪಿಗ್ಗಿನ ರುಚಿ ತೋರಿಸಿದ ಶ್ರೇಯಸ್ಸು ಹಾಸನದ ಗೆಳೆಯರಿಗೆ ಸಲ್ಲುತ್ತದೆ.

ಹೇಳಲೇಬೇಕಾದ, ಮರೆಯಬಾರದ ಮತ್ತೊಂದು ವಿಷಯ, ಹಾಸನ ಪ್ರಾಂತ್ಯದ ಮದುವೆಗಳು. ನಾವು ಕೇರಳಾಪುರದ ಮಿಲಿಟರಿ ಹೋಟೆಲ್‌ಗಳಿಗೆ ಹೋಗಿದ್ದಕ್ಕಿಂತಲೂ ಬೀಗರೂಟಕ್ಕೆ ಹೋಗಿದ್ದೇ ಹೆಚ್ಚು. ನಿಜವಾಗಿಯೂ ಭೂಲೋಕದಲ್ಲಿನ ಮದುವೆಗಳೆಲ್ಲ ಹಾಗೆಯೇ ಇದ್ದರೆ ಚೆನ್ನಾಗಿರುತ್ತಿತ್ತು. ಎಷ್ಟೇ ಕಷ್ಟವಿರಲಿ, ಕಡುಬಡತನವಿರಲಿ, ಮದುವೆ ಮಾಡಿಕೊಂಡ ಹುಡುಗನ ಮನೆಯವರು ಬೀಗರ ಔತಣವನ್ನು ಏರ್ಪಡಿಸುತ್ತಾರೆ. ಸಮಾರಂಭಗಳಿಂದ ಮಾರು ದೂರ ಇರುತ್ತಿದ್ದ ನಾನು ಮದುವೆಗಳಿಗೆ ಹೋಗುವುದನ್ನು ಕಲಿತೆ. ಕರೆಯೋಲೆ ಕೊಡುತ್ತಿದ್ದ ಬಾಂಧವರು 'ಇಂಥ ...... ಲಗ್ನದಲ್ಲಿ ಸಲ್ಲುವ ಶುಭಮುಹೂರ್ತಕ್ಕೆ ಕುಟುಂಬಸಮೇತರಾಗಿ ಆಗಮಿಸಬೇಕೆಂದು' ಬರೆಸಿರುತ್ತಿದ್ದರೂ, ತಾಳಿಕಟ್ಟುವ ಶುಭವೇಳೆಯನ್ನು ಲೆಕ್ಕಕ್ಕಿಡದೆ ಬೀಗರೂಟದ ಸುಮುಹೂರ್ತ ದಿನಾಂಕವನ್ನು ಹುಡುಕಿ ತಪ್ಪದೆ ಭಾಗವಹಿಸುವ ಉಪಕ್ರಮವನ್ನು ನಾವು ಬೆಳೆಸಿಕೊಂಡೆವು. ಈ ವಿಷಯವಾಗಿ ಬಹುತೇಕ ಬೀಗರೂಟಕ್ಕೆ ತನಗೆ ಬಂದಿದ್ದ ಕರೆಯೋಲೆಯನ್ನು ನನಗೂ ವಿಸ್ತರಿಸಿ ಕರೆದುಕೊಂಡು ಹೋಗಿ ಪುಷ್ಕಳ ಭೋಜನ ಮಾಡಿಸುತ್ತಿದ್ದ ಗೆಳೆಯ ನವೀನ್ ಕುಮಾರ್‌ಗೆ ಹಾಗೂ ಕರೆಯದೆ ಹೋದ ನನ್ನಂತಹ ಅಜ್ಞಾತನಿಗೆ ಬಡಿಸಿದ ಆ ಅನ್ನದಾನಿಗಳೆಲ್ಲರಿಗೂ ಕೃತಜ್ಞತೆಗಳನ್ನು ಹೇಳಲೇಬೇಕು. ಸರ್ವಜ್ಞನ 'ಅನ್ನದಾನವೆ ಮಹಾಯಜ್ಞ' ಎಂಬುದನ್ನು ಅಕ್ಷರಶಃ